Crl.Misc.209/2022 ಪಿಡಬ್ಲ್ಯೂ.1

ದಿನಾಂಕಃ 05.07.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಎದುರುದಾರರ ಪರ ಶ್ರೀ ಡಿ.ಕೆ.ಪಿ. ವಕೀಲರಿಂದ:**

ಎದುರುದಾರರು ಅವರ ಅತ್ತೆಯ ಮುಖಾಂತರ ನನಗೆ ಪರಿಚಯವಾಗಿ ಮದುವೆಯಾಗಿರುತ್ತದೆ. ಅವರ ಅತ್ತೆಯ ಹೆಸರು ಸುಧಾ ಮತ್ತು ಅವರು ಕಳಸದ ನಿವಾಸಿಯಾಗಿರುತ್ತಾರೆ. ನನಗೆ ಮದುವೆಯು ಪೂರ್ವದಲ್ಲಿ ಎದುರುದಾರರ ಆರ್ಥಿಕ ಸ್ಥಿತಿಯ ಬಗ್ಗೆ ತಿಳಿದುಕೊಂಡಿರಲಿಲ್ಲ. ಎದುರುದಾರರ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಊರು ಗುತ್ತಿಗೆ ಹಳ್ಳಿ ಮತ್ತು ದೇವರಮನೆಯ ಬಳಿ ವರ್ಷಕ್ಕೆ 380 ಕ್ಕೂ ಹೆಚ್ಚು ಇಂಚು ಮಳೆಯಾಗುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ. ಆದ ಕಾರಣ ಬೆಳೆ ನಾಶವಾಗುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಊರಿನಲ್ಲಿ ಕಾಡಾನೆ ಹಾವಳಿ ಇರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಆದ ಕಾರಣ ನಾನು ಎದುರುದಾರರಿಗೆ ಪೇಟೆಯಲ್ಲಿ ಮನೆ ಮಾಡಲು ಒತ್ತಾಯಿಸುತ್ತಿದೆ ಎಂದರೆ ಸರಿಯಲ್ಲ. ಅವರ ಜಮೀನಿನಲ್ಲಿ ಹೆಚ್ಚು ಮಳಿಯಿಂದಾಗಿ ಬೆಳೆ ನಾಶವಾದ ಕಾರಣ ಎದುರುದಾರರು ಮೇಸ್ತ್ರೀ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೇ ಕೃಷಿ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ.

ಆದ ಕಾರಣ ಎದುರುದಾರರು ಮೇಸ್ತ್ರೀ ಕೆಲಸದಿಂದ ದಿನಕ್ಕೆ ರೂ.500 ರಿಂದ 600 ಹಣವನ್ನು ದುಡಿಮೆ ಮಾಡುತ್ತಾರೆ ಎಂದರೆ ಸರಿಯಲ್ಲ. ಇಂದಿಗೂ ಆರೋಪಿಯು ನನ್ನೊಟ್ಟಿಗೆ ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಹೋಗುತ್ತಾರೆ ಎಂದರೆ ಸರಿಯಲ್ಲ. ನಾನೇ ಎದುರುದಾರರನ್ನು ತಾತ್ಸರ್ಯ ಮಾಡಿದ ಕಾರಣ ಅವರು ನನಗೆ ಜೀವನಾಂಶ ಕೊಡಲು ಅರ್ಹರಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೇ ಆದಾಯ ಮೂಲ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಮಾಡಿರುವಂತಹ ದಾಖಲಾತಿಗಳು ಪ್ರಸ್ತುತ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಅದೇ ರೀತಿ ಎದುರುದಾರರು ನನಗೆ ಯಾವುದೇ ರೀತಿಯ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಹಿರಿಯ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಪ್ರಕರಣದ MC.26/2021 ರ ಸಂಧಾನದ ಸಮಯದಲ್ಲಿ ಎದುರುದಾರರು ನನ್ನೊಡನೆ ಜಗಳ ಮಾಡಿರುತ್ತಾರೆ ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ತಂದೆ ಹಾಗೂ ಸಂಬಂಧಿಕರ ಉತ್ತೇಜನದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಜೀವನಾಂಶವನ್ನು ಎದುರುದಾರರು ನೀಡಲು ಶಕ್ತನಾಗಿರುವುದಿಲ್ಲ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಅನಾರೋಗ್ಯವಿರುವ ಕಾರಣ ನಾನು ಜೀವನಾಂಶವನ್ನು ಕೋರಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ. ಹೇ. ಕೇ. ಸ. ಇ. ಎ. ಒ.,

ಸಾಕ್ಷಿ ಸಹಿಃ

ಸಹಿ/-

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಮೂಡಿಗೆರೆ.